ಮುಂಜರಾಯಿ ಅಧಿನಿಯಮದ ಬಗ್ಗೆ

೧೩೪೧ (೨೬೪೧) ಶ್ರೀ ಮುತ್ತಣ್ಣನವರ್ (ಗೋಕಾಕ್).—ಮಾನ್ಯ ಧಾರ್ಮಿಕ ಹಾಗೂ ದತ್ತಿ ಮತ್ತು ನಿಯಂತ್ರಿತ ಮಾರುಕಟ್ಟೆ ಹಾಗೂ ಖುಷ್ಕಿ ಜಮೀನು ಅಭಿವೃದ್ಧಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ರಾಜ್ಯದಲ್ಲಿರುವ ಮುಜರಾಯಿ ಅಧಿನಿಯಮವು ಜಿಲ್ಲಾವಾರು ಇರುವುದು ನಿಜವೇ ?

ಆ) ಸದರಿ ಅಧಿನಿಯಮವನ್ನು ರಾಜ್ಯಕ್ಕೆ ಒಂದೇ ರೀತಿಯಾಗಿ ಜಾರಿಗೆ ತರಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಕೆ. ಅಮರನಾಥ್ ಶೆಟ್ಟಿ (ಮಾನ್ಯ ಧಾರ್ಮಿಕ ದತ್ತಿ ರಾಜ್ಯ ಸಚಿವರು).—

ಅ) ಇಲ್ಲ–ಆದರೆ ಪ್ರಾಂತ್ಯವಾರು ಕಾಯ್ದೆ ಜಾರಿಯಲ್ಲಿದೆ.

ಆ) ಮುಜರಾಯಿ ಇಲಾಖೆಯ ಆಡಳಿತಕ್ಕಾಗಿ 'ಏಕರೂಪ ಶಾಸನ' ತರುವ ಬಗ್ಗೆ ಸರಕಾರದ ತೀವ್ರ ಪರಿಶೀಲನೆಯಲ್ಲಿದೆ.

ಗೋಕಾಕ್ ತಾಲ್ಲೂಕನ್ನು ಜಿಲ್ಲೆಯನ್ನಾಗಿ ಮಾಪಡಿಸುವ ಬಗ್ಗೆ

೧೩೪೧ (೨೬೪೫) ಶ್ರೀ ಎಂ. ಎಲ್. ಮುತ್ತಣ್ಣನವರ್ (ಗೋಕಾಕ್).—ಮಾನ್ಯ ಕಂದಾಯ, ಯೋಜನಾ ಹಾಗೂ ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಜಿಲ್ಲಾ ವಿಂಗಡಣಾ ಸಮಿತಿಯು ಗೋಕಾಕ್ ತಾಲ್ಲೂಕನ್ನು ಜಿಲ್ಲೆಯನ್ನಾಗಿ ಮಾರ್ಪಡಿಸಲು ಶಿಫಾರಸ್ಸು ಮಾಡಿರುವುದು ನಿಜವೆ ?

ಆ) ಹಾಗಿದ್ದಲ್ಲಿ ಸದರಿ ತಾಲ್ಲೂಕನ್ನು ಜಿಲ್ಲೆಯನ್ನಾಗಿ ಮಾರ್ಪಡಿಸಲು ಹಾಗೂ ಸಮಿತಿಯ ವರದಿಯನ್ನು ಜಾರಿಗೆ ತರಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು).—

ಅ) ನಿಜ.

ಆ) ಎಲ್ಲಾ ಪುನರ್ ವಿಂಗಡಣಾ ಸಮಿತಿಯ ವರದಿಯನ್ನು ಸರ್ಕಾರವು ಪರಿಶೀಲಿಸುತ್ತಿದೆ. ಇದರ ಶಿಫಾರಸ್ಸುಗಳ ಬಗ್ಗೆ ಸೂಕ್ತ ಕಾಲದಲ್ಲಿ ನಿರ್ಧಾರ ಕೈಗೊಳ್ಳಲಾಗುವುದು.

ತಹಸೀಲ್ದಾರ್ ಹುದ್ದೆಯನ್ನು ಮೇಲ್ದರ್ಜೆಗೆ ಏರಿಸುವ ಬಗ್ಗೆ

೧೩೪೨ (೨೬೫೮) ಶ್ರೀ ಐ. ಬಿ. ಶಂಕರ್ (ಚಿಕ್ಕಮಗಳೂರು).—ಮಾನ್ಯ ಕಂದಾಯ ಹಾಗೂ ಯೋಜನೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಕರ್ನಾಟಕ ರಾಜ್ಯದಲ್ಲಿರುವ ತಹಶೀಲ್ದಾರರುಗಳಲ್ಲಿ ಪದವೀಧರರು, ಎರಡು ಪದವಿಪಡೆದವರು, ಮಾಸ್ಟರ್ ಡಿಗ್ರಿ ಪಡೆದವರ ಸಂಖ್ಯೆ ಎಷ್ಟು ?

ಆ) ತಹಶೀಲ್ದಾರ್‌ರವರು ೨ನೇ ಶ್ರೇಣಿಯ ಅಧಿಕಾರಿ ಹಾಗೂ ಲೋಕೋಪಯೋಗಿ ಇಲಾಖೆಯ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜನಿಯರ್ ೧ನೇ ಶ್ರೇಣಿ ಅಧಿಕಾರಿಎಂಬುವುದು ನಿಜವೆ? ತಾಲ್ಲೂಕು ಮಟ್ಟದ ಅನೇಕ ಸಮಿತಿಗಳಿಗೆ ತಹಶೀಲ್ದಾರ್‌ರವರು ಅಧ್ಯಕ್ಷರಾಗಿಯೂ ಲೋಕೋಪಯೋಗಿ ಇಲಾಖೆಯ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್‌ರವರು ಸದಸ್ಯರಾಗಿಯೂ ಇರುವುದು ನಿಜವೆ ?

ಇ) ಶಾಸಕಾಂಗದ ಅಂದಾಜು ಸಮಿತಿಯವರು ಸುಮಾರು ೨ ವರ್ಷಗಳ ಹಿಂದೆಯೇ ಒಳ್ಳೆಯ ಆಡಳಿತದ ಹಿತದೃಷ್ಟಿಯಿಂದ ತಹಶೀಲ್ದಾರ್ ಹುದ್ದೆಯನ್ನು ೧ನೇ ಶ್ರೇಣಿ ಹುದ್ದೆಗೆ ಏರಿಸಲು ಶಿಫಾರಸ್ಸು ಮಾಡಿರುವುದು ನಿಜವೇ ? ಇದರ ಬಗ್ಗೆ ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಹಾಗೂ ಯೋಜನೆ ಮಂತ್ರಿಗಳು).—

ಅ) ಕರ್ನಾಟಕ ರಾಜ್ಯದಲ್ಲಿರುವ ತಹಶೀಲ್ದಾರರುಗಳಲ್ಲಿ

ಪದವೀಧರರು	;	೧೯೭
ಎರಡು ಪದವೀಧರರು	;	೪೬
ಮಾಸ್ಟರ್ ಡಿಗ್ರಿ ಪಡೆದವರು	;	೧೦೭

ಆ) ನಿಜ.

ಇ) ನಿಜ ರಾಜ್ಯದ ಆರ್ಥಿಕ ಪರಿಸ್ಥಿತಿಯು ಈ ತರಹದ ಹೆಚ್ಚಿನ ಖರ್ಚನ್ನು ಭರಿಸುವ ಸ್ಥಿತಿಯಲ್ಲಿ ಇಲ್ಲದೇ ಇರುವುದರಿಂದ ಪ್ರಸ್ತಾವನೆಯನ್ನು ಮುಂದೂಡಲಾಗಿದೆ.

ಯಗಚಿ ಯೋಜನೆ ಪುನರ್ ವಸತಿ

೧೩೪೫ (೨೭೦೫) ಶ್ರೀ ಹೆಚ್. ಕೆ. ಕುಮಾರಸ್ವಾಮಿ, (ಬೇಲೂರು).—ಮಾನ್ಯ ಕಂದಾಯ, ಯೋಜನೆ ಮತ್ತು ಭಾರಿ ಹಾಗೂ ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ವರಾಹಿ ಯೋಜನೆಯಲ್ಲಿ ಭೂಮಿ ಕಳೆದುಕೊಂಡವರಿಗಾಗಿ ಸರ್ಕಾರವು ವಿಶೇಷ ಭೂಸ್ವಾಧೀನ ನಿಯಮಗಳನ್ನು ಹೊರಡಿಸಿರುವುದು ನಿಜವೇ ?

ಆ) ಈ ವಿಶೇಷ ನಿಯಮಗಳನ್ನು ಬೇಲೂರು ತಾಲ್ಲೂಕು ಯಗಚಿ ಯೋಜನೆಯಲ್ಲಿ ಭೂಮಿ ಕಳೆದುಕೊಂಡವರಿಗೆ ಅನ್ವಯವಾಗುತ್ತದೆಯೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಸಚಿವರು).—

ಅ) ಇಲ್ಲ.

ಆ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಆಳಂದ್ ತಾಲ್ಲೂಕಿನಲ್ಲಿ ತಾಲ್ಲೂಕು ಕಛೇರಿ ಕಟ್ಟಲು ಮಂಜೂರಾತಿ

೧೩೪೬ (೨೪೪೧) ಶ್ರೀ ಶರಣಬಸಪ್ಪ ಮಾಲಿ ಪಾಟೀಲ್ (ಆಳಂದ್).—ಮಾನ್ಯ ಕಂದಾಯ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ;—

ಅ) ಆಳಂದ ತಾಲ್ಲೂಕಿನಲ್ಲಿ ತಾಲ್ಲೂಕು ಕಛೇರಿ ಕಟ್ಟಲು ಯಾವಾಗ ಮಂಜೂರಾತಿ ನೀಡಲಾಯಿತು.

ಆ) ಸದರಿ ಕಟ್ಟಡದ ಕೆಲಸ ಈಗ ಯಾವ ಹಂತದಲ್ಲಿದೆ.

ಇ) ಸದರಿ ಕಟ್ಟಡದ ಕೆಲಸವು ವಿಳಂಬವಾಗಲು ಕಾರಣವೇನು. ಪೂರ್ತಿಯಾಗಲು ಸಮಯ ಎಷ್ಟು ಬೇಕಾಗುವುದು ?

ಈ) ಗುತ್ತಿಗೆದಾರರಿಂದ ವಿಳಂಬವಾಗಿದ್ದರೆ ಅವರ ವಿರುದ್ಧ ಸರ್ಕಾರವು ಕೈಗೊಂಡ ಕ್ರಮವೇನು?

ಶ್ರೀ ಎಸ್. ಆರ್. ಬೊಮ್ಮಾಯಿ (ಮಾನ್ಯ ಕಂದಾಯ ಸಚಿವರು).—

ಅ) ದಿನಾಂಕ ೨೩-೧೦-೧೯೮೩ ರಂದು ಸರ್ಕಾರದಿಂದ ಆಡಳಿತಾತ್ಮಕ ಮಂಜೂರಾತಿಯನ್ನು, ಸರ್ಕಾರಿ ಆದೇಶ ಕ್ರಮಾಂಕ: ಆರ್. ಡಿ. ೩೪ ಇ. ಬಿ. ಆರ್. ೮೩ರಲ್ಲಿ ಹಾಗೂ ತಾಂತ್ರಿಕ ಮಂಜೂರಾತಿಯನ್ನು ದಿನಾಂಕ ೭-೧೨-೧೯೮೩ ರಂದು ಮುಖ್ಯ ಇಂಜಿನಿಯರ್‌ರವರಿಂದ ಹೊರಡಿಸಲಾಗಿದೆ.

ಆ) ಕಟ್ಟಡದ ನಿರ್ಮಾಣವು ಮೇಲ್ಚಾವಣಿಯ ಹಂತದಲ್ಲಿದೆ.

ಇ) ಕಟ್ಟಡದ ಕೆಲಸವು ವಿಳಂಬವಾಗಲು ೧೯೮೫-೮೬ನೇ ಸಾಲಿನಲ್ಲಿ ಆಳಂದ ನಗರದಲ್ಲಿ ನೀರಿನ ಅಭಾವವಿದ್ದ ಕಾರಣ ಹಾಗೂ ಗುತ್ತಿಗೇದಾರರ ಅನಾರೋಗ್ಯದ ನಿಮಿತ್ತ ತಡವಾಗಿದೆ. ಆದಷ್ಟು ಜಾಗ್ರತೆಯಾಗಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ಈ) ಈಗಾಗಲೇ ಗುತ್ತಿಗೇದಾರರಿಂದ ಇಲಾಖೆಯ ವತಿಯಿಂದ ಕೆಲಸವನ್ನು ನಿಗದಿತ ಸಮಯದಲ್ಲಿ ಪೂರ್ಣಗೊಳಿಸಲು ಎಚ್ಚರಿಕೆ ನೀಡಲಾಗಿದೆ. ಹಾಗೂ ಕರಾರಿನಂತೆ ದಂಡ ವಿಧಿಸಲಾಗಿದೆ.